# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಟಿ. ಹನುಮಂತಪ್ಪ, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತ್, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಹಾಗೂ ಇನ್ನಿತರರ ಇವರುಗಳ ವಿರುದ್ಧ ಶಿಸ್ತು ಕ್ರಮ – ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸುವ ಬಗ್ಗೆ – ಆದೇಶ.

ಓದಲಾಗಿದೆ:-

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. ಅಆಊಣ/ಗಿಟಆಷಾ/ಃಆ-1865/ಃಆ-1866/ಃಆ-2687/2014/ಂಖಐಔ-1 ದಿನಾಂಕ. 21.01.2017.

2) ಮಾನ್ಯ ಉಪ ಲೋಕಾಯುಕ್ತ-2ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ ಅಆಊಣ/ ಗಿಟಆಷಾ/ ಃಆ-1865 / ಃಆ-1866/ ಃಆ-2687/2014/ಂಖಐಔ-1 ದಿನಾಂಕ. 18.10.2016.

-----

<u>ಪ್ರಸ್ತಾವನೆ</u>

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 21.01.2017ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತ-2ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತ-2 ರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತ-2 ರವರು ಲೋಕಾಯುಕ್ತ ಕಾಯ್ದೆ ಕಲಂ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಯುವರಾಜು ಬಿನ್ ಶೇಖರಪ್ಪ ಮುಳ್ಳೇರ, ಶ್ರೀ ಕಲ್ಲಪ್ಪ ಬಿನ್ ಬಸವಂತಪ್ಪ ಮತ್ತು ಶ್ರೀ ಲಕ್ಷ್ಮಣಪ್ಪ ಬಿನ್ ಹುಚ್ಚಪ್ಪ, ಹಂಚಿ ಗ್ರಾಮ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರುಗಳು ಸೊರಬ ತಾಲ್ಲೂಕು, ಹಂಚಿ ಗ್ರಾಮ ಪಂಚಾಯತಿಯಲ್ಲಿ ಇಂದಿರಾ ಆವಾಸ್, ಬಸವ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ಎರಡು ಸಲ ಸಹಾಯಧನ ನೀಡಿರುವ ಮತ್ತು ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ನಿರ್ವಹಿಸದೇ ಇದ್ದರೂ ಸಹ ನಿರ್ವಹಿಸಲಾಗಿದೆ ಎಂದು ದಾಖಲಿಸಿ ಈ ಕೆಳಕಂಡವರು ಹಣ ದುರುಪಯೋಗಪಡಿಸಿಕೊಂಡಿದ್ದಾರೆಂದು ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ:-

1. ಶ್ರೀ ಶಿವನಗೌಡ, ಅಂದಿನ ಕರ ವಸೂಲಿಗಾರ, ಹಂಚಿ ಗ್ರಾಮ ಪಂಚಾಯತಿ.
2. ಶ್ರೀ ಟಿ. ಹನುಮಂತಪ್ಪ, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತಿ.
3. ಶ್ರೀ ಕಾಳಿಂಗರಾಜ್, ಲೆಕ್ಕ ಪರಿಶೋಧಕರು.
4. ಶ್ರೀ ಎನ್. ಗೋಪಿನಾಥರಾವ್, ಅಂದಿನ ಕಾರ್ಯದರ್ಶಿ (ಪ್ರಸ್ತುತ ನಿವೃತ್ತ)

ಸದರಿ ದೂರಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಯು ತನಿಕೆ ಕೈಗೊಂಡು ಸಲ್ಲಿಸಿರುವ ತನಿಖಾ ವರದಿಯಲ್ಲಿ, ಬಸವ ವಸತಿ ಯೋಜನೆ ಅಡಿಯಲ್ಲಿ 2010-11ರಲ್ಲಿ ಶ್ರೀಮತಿ ಶೋಭಾಬಾಯಿ ಕೋಂ ವೇಣ್ಯಾನಾಯ್ಕ, ಶ್ರೀಮತಿ ಉಮಾಬಾಯಿ ಕೋಂ ಯೋಗೇಶ ನಾಯ್ಕ, ಶ್ರೀಮತಿ ಗಂಗಾಬಾಯಿ ಕೋಂ ರಾಮನಾಯ್ಕ, 2011-12ನೇ ಸಾಲಿನಲ್ಲಿ ಶ್ರೀಮತಿ ಶಾಬೀರಾಬೀ ಕೋಂ ಮುಲ್ಲಾಸಾಬ್, ಶ್ರೀಮತಿ ಹೈರುನ್ನಬೀ ಕೋಂ ಬಷೀರ್‌ಸಾಬ್, 2013-14ನೇ ಸಾಲಿನಲ್ಲಿ ಶ್ರೀಮತಿ ಪರ್ವಿನ್‌ಬೀ ಕೋಂ ಅಬ್ಬಾಸ್ ಅಲಿ ರವರಿಗೆ ವಸತಿ ಮಂಜೂರಾಗಿದ್ದು, ಹಣದ ಅವ್ಯವಹಾರವಾಗಿರುತ್ತದೆಂದು ಹಾಗೂ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಕೈಗೊಳ್ಳಲಾದ ಈ ಕೆಳಕಂಡ ಕಾಮಗಾರಿಗಳಲ್ಲಿ ಒಟ್ಟು ರೂ. 12,75,694/- ಗಳು ಅವ್ಯವಹಾರವಾಗಿರುತ್ತದೆಂದು ತಿಳಿಸಿರುತ್ತಾರೆ:-

1. ಕೆಳಸರ ಕಟ್ಟೆ ಕಾಮಗಾರಿ
2. ಅಮಟೆಕಟ್ಟೆ ಕೆರೆ ಹೂಳೆತ್ತುವುದು
3. ಬಸರೀಕಟ್ಟೆ ಕೆರೆ ಹೂಳೆತ್ತುವುದು
4. ನಿಂಗನಕಟ್ಟೆ ಕಾಲುವೆ ಕಾಮಗಾರಿ
5. ಹಾವಗೊಂಡನಕೇರಿ ಕಾಲುವೆ ನಿರ್ಮಾಣ
6. ಹಂಚಿತಾಂಡದಿಂದ ಚಿಕ್ಕಮಾಗಡಿ ರಸ್ತೆ ಕಾಮಗಾರಿ
7. ಊರೊಳಗಿನ ಚಾನಲ್
8. ಊರ ಹೊರಗಿನ ಚಾನಲ್
9. ಹಿಂದು ಮುಸ್ಲಿಂ ರುದ್ರಭೂಮಿ

ಮೇಲೆ ತಿಳಿಸಿರುವ ಕಾಮಗಾರಿಗಳಿಗೆ ಈ ಕೆಳಕಂಡವರು ಜವಾಬ್ದಾರರಾಗಿರುತ್ತಾರೆಂದು ತಿಳಿಸಿರುತ್ತಾರೆ:-

1. ಶ್ರೀ ಟಿ.ಹನುಮಂತಪ್ಪ, ಅಂದಿನ ಕಾರ್ಯದರ್ಶಿ - ರೂ. 2,02,942/-
2. ಶ್ರೀಗೋಪಿನಾಥರಾವ್, ಅಂದಿನ ಕಾರ್ಯದರ್ಶಿ - ರೂ. 1,81,494/-
3. ಶ್ರೀ ಜಿ.ಎಂ. ಮಡಿವಾಳರ, ಅಂದಿನ ಕಾರ್ಯದರ್ಶಿ - ರೂ. 1,07,462/-
4. ಶ್ರೀ ಜಿ.ವಿ.ಪ್ರಕಾಶ್, ಕಿರಿಯ ಇಂಜಿನಿಯರ್ - 2,90,898/-
5. ಶ್ರೀ ಟಿ. ನಾಗಪ್ಪ, ಅಧ್ಯಕ್ಷರು - 81,320/-
6. ಶ್ರೀಮತಿ ಶಾಂತಮ್ಮ, ಅಧ್ಯಕ್ಷರು - 1,50,000/-
7. ಶ್ರೀಮತಿ ರತ್ನಮ್ಮ, ಅಧ್ಯಕ್ಷರು - 1,51,462/-
8. ಶ್ರೀ ಜಿ. ಮಂಜಪ್ಪ, ಅಧ್ಯಕ್ಷರು - 79,352/-
9. ಶ್ರೀಮತಿ ಗಂಗಮ್ಮ, ಅಧ್ಯಕ್ಷರು - 28,764/-

ಸದರಿ ತನಿಖಾ ವರದಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಯು ಆಪಾದಿತರುಗಳಿಂದ ಆಕ್ಷೇಪಣೆಗಳನ್ನು ಪಡೆಯಲಾಗಿದ್ದು, ಈ ಪೈಕಿ ಶ್ರೀ ಟಿ.ನಾಗಪ್ಪ, ಶ್ರೀಮತಿ ಶಾಂತಮ್ಮ, ಶ್ರೀಮತಿ ಗಂಗಮ್ಮ ಮತ್ತು ಶ್ರೀ ಜಿ.ಮಂಜಪ್ಪ ಇವರುಗಳನ್ನು ಹೊರತುಪಡಿಸಿ ಇನ್ನುಳಿದ ಆಪಾದಿತರು ಸಲ್ಲಿಸಿರುವ ಆಕ್ಷೇಪಣೆಗಳಲ್ಲಿ ಎಲ್ಲಾ ಕಾಮಗಾರಿಗಳನ್ನು ಬಸವ ವಸತಿ ಯೋಜನೆ ಹಾಗೂ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿಯಲ್ಲಿ ನೀಡಲಾದ ಮಾರ್ಗಸೂಚಿಗಳಿಗನುಗುಣವಾಗಿ ನಿರ್ವಹಿಸಲಾಗಿದೆಯೆಂದು, ಈ ಕಾಮಗಾರಿಗಳಲ್ಲಿ ಯಾವುದೇ ಅವ್ಯವಹಾರವಾಗಿಲ್ಲವೆಂದು ಹೇಳಿಕೆ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ-2ರವರು ದೂರಿಗೆ ಸಂಬಂಧಿಸಿದ ದಾಖಲೆಗಳು, ಆಪಾದಿತರು ಸಲ್ಲಿಸಿರುವ ಆಕ್ಷೇಪಣೆಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಬಸವ ವಸತಿ ಯೋಜನೆ ಅಡಿಯಲ್ಲಿ 2010-11, 2011-12 ಮತ್ತು 2013-14ನೇ ಸಾಲಿನಲ್ಲಿ ಹಣದ ಅವ್ಯವಹಾರವಾಗಿದೆಯೆಂದು ಹಾಗೂ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಲ್ಲಿ ಒಟ್ಟು ರೂ. 12,75,694/- ಗಳು ಅವ್ಯವಹಾರವಾಗಿದ್ದು, ಇದಕ್ಕೆ ಮೇಲೆ ತಿಳಿಸಿರುವ ಆಪಾದಿತರು ಜವಾಬ್ದಾರರಾಗಿರುತ್ತಾರೆಂದು, ಸದರಿಯವರುಗಳು ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಬಸವ ವಸತಿ ಯೋಜನೆ ಮತ್ತು ಎಂಜಿಎನ್‌ಆರ್‌ಇಜಿಎ ಯೋಜನೆಗಳ ಮಾರ್ಗಸೂಚಿಗಳನ್ನು ಸರಿಯಾದ ರೀತಿ ಪಾಲಿಸದೇ ಕರ್ತವ್ಯ ಲೋಪ ಎಸಗಿರುತ್ತಾರೆಂದು, ಆಪಾದಿತರುಗಳ ವಿರುದ್ಧದ ನಡವಳಿಕೆಯನ್ನು ಕೈ ಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಅಂಶಗಳು ಕಂಡುಬರುತ್ತಿಲ್ಲವೆಂದು, ಶ್ರೀ ಶಿವನಗೌಡ, ಅಂದಿನ ಕರವಸೂಲಿಗಾರ ಮತ್ತು ಶ್ರೀ ಕಾಳಿಂಗರಾಜ್, ಲೆಕ್ಕಪರಿಶೋಧಕ ಇವರುಗಳು ಯಾವುದೇ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿಲ್ಲದ ಕಾರಣ ಇವರುಗಳ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆಯೆಂದು, ಶ್ರೀ ಟಿ. ನಾಗಪ್ಪ, ಶ್ರೀಮತಿ ಶಾಂತಮ್ಮ, ಶ್ರೀಮತಿ ರತ್ನಮ್ಮ, ಮತ್ತು ಶ್ರೀ ಜಿ. ಮಂಜಪ್ಪ, ಇವರುಗಳು ಮಾಜಿ ಅಧ್ಯಕ್ಷರುಗಳಾಗಿದ್ದು, ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಕ್ರಮ ಕೈಗೊಳ್ಳಬೇಕೆಂದು, ಇನ್ನುಳಿದಂತೆ ಈ ಕೆಳಕಂಡ ಆಪಾದಿತರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪ / ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿಯವರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ-2ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ:-

1. ಶ್ರೀ ಹನುಮಂತಪ್ಪ, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತ್ (ಹಾಲಿ ಹುರುಳಿ ಗ್ರಾಮ ಪಂಚಾಯತ್)
2. ಶ್ರೀ ಗೋಪಿನಾಥರಾವ್, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತ್ (ಹಾಲಿ ನಿವೃತ್ತ)
3. ಶ್ರೀ ಜಿ.ಎಂ. ಮಡಿವಾಳರ, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತ್ (ಹಾಲಿ ನಿವೃತ್ತ)
4. ಶ್ರೀ ಜಿ.ವಿ.ಪ್ರಕಾಶ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ.

ಅಲ್ಲದೆ, ಪ್ರಕರಣದಲ್ಲಿ ಭಾಗಿಯಾಗಿರುವ ಮೇಲೆ ತಿಳಿಸಿರುವ 9 ಜನ ಆಪಾದಿತರುಗಳಿಂದ ಉಂಟಾಗಿರುವ ಆರ್ಥಿಕ ನಷ್ಟದ ಮೊತ್ತವನ್ನು ಕಾನೂನಿನ್ವಯ ವಸೂಲಿ ಮಾಡುವಂತೆ ಹಾಗೂ ಸದರಿಯವರುಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ ಎಂದು ತಿಳಿಸಿರುತ್ತಾರೆ.

ಮುಂದುವರೆದು, ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರುಗಳಾದ ಶ್ರೀ ಎನ್. ಗೋಪಿನಾಥರಾವ್ ಹಾಗೂ ಶ್ರೀ ಜಿ.ಎಂ.ಮಡಿವಾಳರ ಇವರುಗಳು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್.ನಿಯಮ 214 (2)(ಬಿ)(i) ರಡಿ ಇಲಾಖಾ ವಿಚಾರಣೆಗೆ ಅನುಮತಿ ನೀಡುವಂತೆ ಸಹ ತಿಳಿಸಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರು ಪ್ರಶ್ನಿತ ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಬಸವ ವಸತಿ ಯೋಜನೆ ಮತ್ತು ಎಂಜಿಎನ್‌ಆರ್‌ಇಜಿಎ ಯೋಜನೆಗಳ ಮಾರ್ಗಸೂಚಿಗಳನ್ನು ಸರಿಯಾದ ರೀತಿ ಪಾಲಿಸದೇ ಕರ್ತವ್ಯ ಲೋಪ ಎಸಗಿರುವುದು ಹಾಗೂ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಲ್ಲಿ ಒಟ್ಟು ರೂ. 12,75,694/- ಗಳು ಅವ್ಯವಹಾರವೆಸಗಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಆದ್ದರಿಂದ ಸದರಿ ಆಪಾದಿತರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1) ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿ ಹಣದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವೆಂದು ಕಂಡುಬರುತ್ತದೆ.

ಆದ್ದರಿಂದ, ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರುಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 14 ಇಎನ್‌ಕ್ಯೂ 2017 ಬೆಂಗಳೂರು,**
**ದಿನಾಂಕ. 23.02.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಮಾನ್ಯ ಉಪಲೋಕಾಯುಕ್ತ-2ರವರಿಗೆ ವಹಿಸಿ ಆದೇಶಿಸಿದೆ:-

1. ಶ್ರೀ ಟಿ. ಹನುಮಂತಪ್ಪ, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತ್, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
2. ಶ್ರೀ ಜಿ.ವಿ.ಪ್ರಕಾಶ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ.

ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಹಾಗೂ ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುವ ಈ ಕೆಳಕಂಡ ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 (2)(ಬಿ)(i) ರಡಿ ಅನುಮತಿ ನೀಡಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ)ರ ಅನುಸಾರ ಮಾನ್ಯ ಉಪಲೋಕಾಯುಕ್ತ-2ರವರಿಗೆ ವಹಿಸಿದೆ:-

1. ಶ್ರೀ ಎನ್. ಗೋಪಿನಾಥರಾವ್, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತ್, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ (ಹಾಲಿ ನಿವೃತ್ತ)
2. ಶ್ರೀ ಜಿ.ಎಂ.ಮಡಿವಾಳರ, ಅಂದಿನ ಕಾರ್ಯದರ್ಶಿ, ಹಂಚಿ ಗ್ರಾಮ ಪಂಚಾಯತ್, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ (ಹಾಲಿ ನಿವೃತ್ತ)

ಪ್ರಕರಣದಲ್ಲಿ ಭಾಗಿಯಾಗಿರುವ 9 ಜನ ಆಪಾದಿತರುಗಳಿಂದ ಉಂಟಾಗಿರುವ ಆರ್ಥಿಕ ನಷ್ಟದ ಮೊತ್ತವನ್ನು ಕಾನೂನಿನ್ವಯ ವಸೂಲಿ ಮಾಡುವಂತೆ ಹಾಗೂ ಸದರಿಯವರುಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರಿಗೆ ತಿಳಿಸಿದೆ.

ಪ್ರಕರಣದಲ್ಲಿ ಭಾಗಿಯಾಗಿರುವ ಮಾಜಿ ಅಧ್ಯಕ್ಷರುಗಳಾದ ಶ್ರೀ ಟಿ. ನಾಗಪ್ಪ, ಶ್ರೀಮತಿ ಶಾಂತಮ್ಮ, ಶ್ರೀಮತಿ ರತ್ನಮ್ಮ, ಶ್ರೀ ಜಿ. ಮಂಜಪ್ಪ ಮತ್ತು ಶ್ರೀಮತಿ ಗಂಗಮ್ಮ ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಕ್ರಮ ಕೈಗೊಳ್ಳುವಂತೆ ಸಕ್ಷಮ ಪ್ರಾಧಿಕಾರವಾದ ನಿರ್ದೇಶಕರು (ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/02/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ.
7. ಸಂಬಂಧಪಟ್ಟ ಅಧಿಕಾರಿ / ನೌಕರರಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರ ಮುಖಾಂತರ.
8. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಬಿ&ಸಿ).
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ /ಅಪರ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
11. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.